ಯೋಜನಾ ಗಾತ್ರ ನಿಗದಿಪಡಿಸುವಲ್ಲಿ ರಾಜ್ಯ ಯೋಜನಾ ಮಂಡಳಿಯ ಪಾತ್ರವಿರುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಇವರು ರಾಜ್ಯ ಯೋಜನಾ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ.

ಪಡಿತರ ಚೀಟಿ ವಿತರಣೆ

2799 (2984), ಶ್ರೀ ಹಾಲಾಡಿ ಶ್ರೀನಿವಾಸ್ ಶೆಟ್ಟಿ (ಕುಂದಾಪುರ)

ಅ) ಬಿಪಿಎಲ್ ಪಡಿತರ ಚೀಟಿ ನೀಡುವಲ್ಲಿ ಅವ್ಯವಸ್ಥೆಯಿಂದಾಗಿ ನಿಜವಾದ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಚೀಟಿ ದೊರಕದಿರುವುದು ಮತ್ತು ಕಡು ಬಡವರಿಗೆ ಎಪಿಎಲ್ ಪಡಿತರ ಚೀಟಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಲೋಪದೋಷಗಳನ್ನು ಸರಿಪಡಿಸಿ ಅರ್ಹರಿಗೆ ಬಿಪಿಎಲ್ ಚೀಟಿ ನೀಡುವ ಬಗ್ಗೆ ಸರ್ಕಾರದ ನಿಲುವೇನು;

ಇ) ಪಡಿತರ ಚೀಟಿ ನವೀಕರಿಸುವ ಸಂದರ್ಭದಲ್ಲಿ ಮನೆಯವರೆಲ್ಲರೂ ಏಕಕಾಲದಲ್ಲಿ ಭಾವಚಿತ್ರ ತೆಗೆಯಲು ಬರಬೇಕೆನ್ನುವುದು ಸಮಂಜಸವೇ; ಇದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಈ ಬಗ್ಗೆ ಸರ್ಕಾರದದ ನಿಲುವೇನು?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ. ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದದೆ ಇರುವ ಕಡು ಬಡವರು Application KIOSKಗಳಾದ ಗ್ರಾಮ ಪಂಚಾಯತಿ/ಬೆಂಗಳೂರು–

one/ಕರ್ನಾಟಕ–one ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಆನಾಸ 80 ಡಿಆರ್‌ಎ 2012, ದಿನಾಂಕ:24.08.2012ರಲ್ಲಿ ಬಿಪಿಎಲ್ ಕಾರ್ಡುಗಳನ್ನು ವಿತರಿಸಲು ಮಾನದಂಡಗಳನ್ನು ನಿಗಧಿಪಡಿಸಿದ್ದು, ಈ ಕೆಳಗಿನ ಆರ್ಥಿಕ ಸದೃಢ ಕುಟುಂಬಗಳನ್ನು ಹೊರತುಪಡಿಸಿ ಉಳಿದ ಕುಟುಂಬಗಳನ್ನು ಬಿಪಿಎಲ್ ಕಾರ್ಡ್ ಹೊಂದಲು ಅರ್ಹ ಕುಟುಂಬಗಳೆಂದು ಪರಿಗಣಿಸುವಂತೆ ಆದೇಶಿಸಲಾಗಿದೆ.

1. ಆದಾಯ ತೆರಿಗೆ ಪಾವತಿಸುವ ಸದಸ್ಯರನ್ನು ಒಳಗೊಂಡ ಎಲ್ಲಾ ಕುಟುಂಬಗಳು.
2. ಎಲ್ಲಾ ವರ್ಗದ ಸರ್ಕಾರಿ ನೌಕರರು.
3. ಸರ್ಕಾರಿ ಸ್ವಾಮ್ಯದ ಉದ್ಯಮಗಳು/ಮಂಡಳಿಗಳು/ನಿಗಮಗಳು ಖಾಯಂ ನೌಕರರು.
4. ಸ್ವಾಯತ್ತ ಸಂಸ್ಥೆಯ/ಮಂಡಳಿಗಳ ನೌಕರರು.
5. ಸಹಕಾರ ಸಂಘಗಳ ಖಾಯಂ ಸಿಬ್ಬಂದಿಗಳು.
6. ವೃತ್ತಿಪರ ವರ್ಗಗಳು, ವೈದ್ಯರುಗಳು, ಆಸ್ಪತ್ರೆಗಳ ನೌಕರರು, ವಕೀಲರುಗಳು, ಲೆಕ್ಕ ಪರಿಶೋಧಕರುಗಳು.
7. ಸೈಕಲ್ ಮೇಲೆ ಮತ್ತು ಗಾಡಿಗಳ ಮೇಲೆ ತಳ್ಳಿಕೊಂಡು ಅಥವಾ ರಸ್ತೆಯ ಪಕ್ಕದಲ್ಲಿ ಕುಳಿತು ವ್ಯಾಪಾರ ಮಾಡುವ ಮತ್ತು ತರಕಾರಿ ಮಾತ್ರ ವ್ಯಾಪಾರ ಮಾಡುವ ಹಾಗೂ ಗೂಡಂಗಡಿಗಳಲ್ಲಿ ವ್ಯಾಪಾರ ಮಾಡುವವರನ್ನು ಹೊರತುಪಡಿಸಿ ಉಳಿದ ಎಲ್ಲಾ ವ್ಯಾಪಾರಸ್ಥರು.
8. 3 ಹೆಕ್ಟೇರ್ (7 1/2 ಎಕರೆ) ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿದವರು.
9. ಒಂದು ಆಟೋರಿಕ್ಷಾವನ್ನು ಹೊಂದಿ, ಸ್ವಂತ ಓಡಿಸುತ್ತಿದ್ದು ಬೇರೆ ಆದಾಯ ಮೂಲವಿಲ್ಲದವರನ್ನು ಹೊರತುಪಡಿಸಿ,

100 ಸಿಸಿಗೆ ಮೇಲ್ಪಟ್ಟ ಇಂಧನ ಚಾಲಿತ ವಾಹನಗಳನ್ನು (ದ್ವಿಚಕ್ರ, ತ್ರಿಚಕ್ರ, ಕಾರು ಇತ್ಯಾದಿ ವಾಹನ) ಹೊಂದಿರುವ ಸದಸ್ಯರನ್ನು ಒಳಗೊಂಡ ಕುಟುಂಬ.

10. ಅನುದಾನರಹಿತ ಕನ್ನಡ ಶಾಲೆಗಳ ನೌಕರರನ್ನು ಹೊರತುಪಡಿಸಿ, ಅನುದಾನಿತ/ಅನುದಾನರಹಿತ ಶಾಲಾ ಕಾಲೇಜುಗಳ ನೌಕರರು.
11. ನೋಂದಾಯಿತ ಗುತ್ತಿಗೆದಾರರು, ಎಪಿಎಂಸಿ, ಟ್ರೇಡರ್ಸ್/ಕಮೀಷನ್ ಏಜೆಂಟ್ಸ್/ಬೀಜ ಮತ್ತು ಗೊಬ್ಬರ ಇತ್ಯಾದಿ ಡೀಲರ್ಸ್.
12. ಮನೆ/ಮಳಿಗೆ ಕಟ್ಟಡಗಳನ್ನು ಬಾಡಿಗೆಗೆ ನೀಡಿ ವರಮಾನ ಪಡೆಯುವವರು.
13. ಪ್ರತಿ ತಿಂಗಳಿಗೆ ಸರಾಸರಿ ವಿದ್ಯುತ್ ಬಿಲ್ ₹ 450.00 ಕ್ಕಿಂತ ಮೇಲ್ಪಟ್ಟು ಪಾವತಿಸುವ ಕುಟುಂಬಗಳು.
14. ಬಹುರಾಷ್ಟ್ರೀಯ ಕಂಪನಿ, ಉದ್ದಿಮೆ/ಕೈಗಾರಿಕೆಗಳ ನೌಕರರು.

ಈ ಮೇಲ್ಕಂಡ ಮಾನದಂಡಗಳಿಗೆ ಒಳಪಡದೆ ಇರುವವರು ಬಿಪಿಎಲ್ ಕುಟುಂಬಗಳೆಂದು ಗುರುತಿಸಲಾಗುತ್ತಿದೆ.

ಆ) ಪ್ರಶ್ನೆ (ಅ) ನಲ್ಲಿ ಉತ್ತರಿಸಿರುವಂತೆ.

ಇ) ಪಡಿತರ ಚೀಟಿ ನವೀಕರಿಸುವ ಸಂದರ್ಭದಲ್ಲಿ ಮನೆಯವರೆಲ್ಲರೂ ಏಕಕಾಲದಲ್ಲಿ ಭಾವಚಿತ್ರ ತೆಗೆಯಲು ಬರಬೇಕೆನ್ನುವುದು ಕಡ್ಡಾಯವಾಗಿರುವುದಿಲ್ಲ. ಕುಟುಂಬ ಸದಸ್ಯರು ಪ್ರತ್ಯೇಕವಾಗಿ ಹೋಗಿ ಭಾವಚಿತ್ರವನ್ನು ತೆಗೆಸಲು ಅವಕಾಶವಿರುತ್ತದೆ ಹಾಗೂ ಪಡಿತರ ಚೀಟಿದಾರರು ಎಲ್ಲಾ ಸದಸ್ಯರ ಸಂಖ್ಯೆಗಳನ್ನು UID ಸಂಖ್ಯೆಗಳನ್ನು ಎಸ್.ಎಂ.ಎಸ್. ಮೂಲಕವಾಗಲೀ ಅಥವಾ Application KIOSKಗಳಿಗೆ ಹೋಗಿ ಸಲ್ಲಿಸಬಹುದಾಗಿದೆ. ಇಂತಹ ಪ್ರಕರಣದಲ್ಲಿ ಕುಟುಂಬದ ಎಲ್ಲಾ ಸದಸ್ಯರು Application KIOSKಗೆ ಹೋಗಬೇಕಾದ ಅಗತ್ಯವಿರುವುದಿಲ್ಲ.